ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 15-04-2017

# ಪತ್ರಿಕಾ ಆಮಂತ್ರಣ

1. In Association with the Karnataka Human Rights Commission and Hanns Seidal Foundation A Consultation Seminar on Active Convergence on "Safe City is a Smart City"

Inauguration:

Mr. Subhaschandra Kunthia, IAS Chief Secretary, GOK,

Welcome Address:

Ms. Uma Mahadevan, IAS, Principal Secretaty DWC

Keynote Speech:

Ms. Meera. C. Saksena, Hon'ble Chairperson, Karnataka State Human Rights Commission

Venue: Hotel Radission Blue Atria Hotel, Palace Road, Bangalore
Date: 17-4-2017 Monday at 10-00 A.M.

2. **Ministry of Youth Affairs and Sports Bengaluru and Bengaluru University.**

**National Young Leaders Award Programme 2015-16**

**<u>Chief Guest</u>:**

B.N. Vijay Kumar, M.L.A.
Jayanagar Constitutency.

Dr. Ashwathanaryan, M.L.A,
Malleshwaram Constituency.

**<u>Presided By:</u>**

Dr. Muni Raju M,
Vice Chancellor, Bengaluru University, Bengaluru.

Date: 17-04-2017, Monday Time : 10.30 AM.

Place: M.L.A. Academy of Higher Learning, Malleshwaram, Bengaluru – 560 043.

## <u>ಪತ್ರಿಕಾ ಪ್ರಕಟಣೆ</u>

## <u>ನಾಡಪ್ರಭು ಕೆಂಪೇಗೌಡ ಜನ್ಮ ದಿನಾಚರಣೆ ಮುಂದೂಡಿಕೆ</u>

ಬೆಂಗಳೂರು, ಏಪ್ರಿಲ್ 15 (ಕರ್ನಾಟಕ ವಾರ್ತೆ)

ನಾಡಪ್ರಭು ಕೆಂಪೇಗೌಡ ಅವರ ಜನ್ಮ ದಿನಾಚರಣೆಯನ್ನು ರಾಜ್ಯ ಸರ್ಕಾರ ಏಪ್ರಿಲ್ 17 ರ ಸೋಮವಾರದಂದು ಆಚರಿಸಲು ಈ ಹಿಂದೆ ನಿರ್ಧರಿಸಿದ್ದು, ಆದರೆ ಕಾರಣಾಂತರಗಳಿಂದ ಈ ಕಾರ್ಯಕ್ರಮವನ್ನು ಮುಂದೂಡಲಾಗಿದ್ದು, ಬೆಂಗಳೂರು ನಿರ್ಮಾತೃ ಕೆಂಪೇಗೌಡ ಅವರ ಜನ್ಮ ದಿನಾಚರಣೆ ದಿನಾಂಕವನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು ಎಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ.

ಆದರೆ, ಈ ಜನ್ಮ ದಿನಾಚರಣೆ ಕಾರ್ಯಕ್ರಮದ ಮುಂದಿನ ದಿನಾಂಕವನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಎಂಆರ್‌ಎಂ:ಜಿಪಿಆರ್

## “ಸಂಕ್ಷಿಪ್ತ ಕಲಿಕಾ ಸೂಚಕಗಳು”
## ಸಾರ್ವಜನಿಕರಿಂದ ಸೂಕ್ತ ಸಲಹೆ ಸೂಚನೆಗೆ ಆಹ್ವಾನ

ಬೆಂಗಳೂರು, ಏಪ್ರಿಲ್ 15 (ಕರ್ನಾಟಕ ವಾರ್ತೆ)

ಪೋಷಕರು ತಮ್ಮ ಮಕ್ಕಳು ಆಯಾ ತರಗತಿಯಲ್ಲಿ ವಿವಿಧ ವಿಷಯಗಳಲ್ಲಿ ಕಲಿಯಬೇಕಾದ ಪ್ರಮುಖ ಅಂಶಗಳನ್ನು ತಿಳಿದುಕೊಳ್ಳುವ ಸಲುವಾಗಿ 1 ರಿಂದ 5 ನೇ ತರಗತಿಯವರೆಗೆ ಎನ್.ಸಿ.ಇ.ಆರ್.ಟಿ. ಕಲಿಕಾ ಫಲಿತಗಳು ಹಾಗೂ ರಾಜ್ಯ ಪಠ್ಯಕ್ರಮವನ್ನು ಗಮನದಲ್ಲಿಟ್ಟುಕೊಂಡು ತರಗತಿವಾರು, ವಿಷಯವಾರು “ಸಂಕ್ಷಿಪ್ತ ಕಲಿಕಾ ಸೂಚಕಗಳನ್ನು” ಸಿದ್ಧಪಡಿಸಲಾಗಿದೆ.

ಇವುಗಳ ಮಾಹಿತಿ www.dsert.kar.nic.in ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಇವುಗಳ ಬಗ್ಗೆ ಶಿಕ್ಷಣಾಸಕ್ತರು/ಪೋಷಕರು/ಸಾರ್ವಜನಿಕರು ಸೂಕ್ತ ಸಲಹೆ ಸೂಚನೆಗಳಿದ್ದಲ್ಲಿ seeu.dsert-ka@kar.nic.in ಅಥವಾ ನಿರ್ದೇಶಕರು ಡಿ.ಎಸ್.ಇ.ಆರ್.ಟಿ. ನಂ 4, 100 ಅಡಿ ರಿಂಗ್ ರೋಡ್, ಬನಶಂಕರಿ, 3ನೇ ಹಂತ, ಬೆಂಗಳೂರು – 85 ಇವರಿಗೆ ದಿನಾಂಕ: 20–04–2017 ರೊಳಗೆ ಒದಗಿಸಲು ಕೋರಿದೆ.

ಎಂಆರ್‌ಎಂ:ಜಿಪಿಆರ್

## ಏಪ್ರಿಲ್ 24 ರಿಂದ ಮೇ 23 ರವರೆಗೆ
## “ಖಾದಿ ಉತ್ಸವ – 2017”

ಬೆಂಗಳೂರು, ಏಪ್ರಿಲ್ 15 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಸಹಯೋಗದೊಂದಿಗೆ ರಾಷ್ಟ್ರಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ "ಖಾದಿ ಉತ್ಸವ – 2017" ಅನ್ನು ಏಪ್ರಿಲ್ 24 ರಿಂದ ಮೇ 23 ರವರೆಗೆ ಬೆಂಗಳೂರಿನ ಗಾಂಧಿನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ (ಫ್ರೀಡಂ ಪಾರ್ಕ್) ಏರ್ಪಡಿಸಲಾಗಿದೆ.

ಈ ವಸ್ತು ಪ್ರದರ್ಶನದ ಉದ್ಘಾಟನೆಯನ್ನು ಏಪ್ರಿಲ್ 24 ರಂದು ಸ್ವಾತಂತ್ರ್ಯ ಉದ್ಯಾನವನ, ಪೀಪಲ್ ಪ್ಲಾಜಾ, ಗಾಂಧಿನಗರ, ಬೆಂಗಳೂರು ಇಲ್ಲಿ ಸಂಜೆ 4.00 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಗಾಂಧಿನಗರ ಕ್ಷೇತ್ರದ ಶಾಸಕರಾದ ಶ್ರೀ ದಿನೇಶ್ ಗುಂಡೂರಾವ್ ಅವರು ವಹಿಸಲಿದ್ದಾರೆ. ಮಳಿಗೆಗಳ ಉದ್ಘಾಟನೆಯನ್ನು ಸಣ್ಣ ಕೈಗಾರಿಕೆ ಸಚಿವ ರಮೇಶ್ ಲ. ಜಾರಕಿಹೊಳಿ ಅವರು ನೆರವೇರಿಸಲಿದ್ದಾರೆ. ಪ್ರಾತ್ಯಕ್ಷಿಕೆ ಉದ್ಘಾಟನೆಯನ್ನು ಬೆಂಗಳೂರು ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಹಾಗೂ ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಕೆ.ಜೆ.ಜಾರ್ಜ್ ಅವರು ಉದ್ಘಾಟನೆಯನ್ನು ಮಾಡಲಿದ್ದಾರೆ. ಥೀಮ್ ಫೆವಿಲಿಯನ್ ಉದ್ಘಾಟನೆಯನ್ನು ಯಲುವನಹಳ್ಳಿ ಎನ್. ರಮೇಶ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು ಇವರು ನೆರವೇರಿಸಲಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ಬೆಂಗಳೂರು ಕೇಂದ್ರ ಕ್ಷೇತ್ರದ ಲೋಕಸಭಾ ಸದಸ್ಯ ಪಿ.ಸಿ. ಮೋಹನ್ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಎಂಆರ್‌ಎಂ:ಜಿಪಿಆರ್

## ಅರ್ಹ ಅಭ್ಯರ್ಥಿಗಳ ಮೂಲ ದಾಖಲೆ ಪರಿಶೀಲನೆ

ಬೆಂಗಳೂರು, ಏಪ್ರಿಲ್ 15 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿನ ಜವಳಿ ತನಿಖಾಧಿಕಾರಿ, ಕರ್ನಾಟಕ ಗೃಹ ಮಂಡಳಿಯಲ್ಲಿನ ಕಿರಿಯ ಅಭಿಯಂತರರರು ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿನ ನಗರ ಸಭೆ/ಪುರಸಭೆ ಕಿರಿಯ

ಅಭಿಯಂತರರ ಹುದ್ದೆಗಳಿಗೆ ಸಂಬಂಧಿಸಿದಂತೆ ಅರ್ಹ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಆಯೋಗದ ಕೇಂದ್ರ ಕಚೇರಿಯಲ್ಲಿ ಏಪ್ರಿಲ್ 25 ರಂದು ಬೆಳಿಗ್ಗೆ 9.30 ಗಂಟೆಗೆ ನಿಗಧಿಪಡಿಸಿದೆ.

ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. ಸೂಚನಾಪತ್ರವನ್ನು ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆ ಮತ್ತು ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಅಂತರ್ಜಾಲ http://kpsc.kar.nic.in ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 733783089 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಕೆಎನ್‌ಕೆ:ಜಿಪಿಆರ್

## "Parent-facing Learning Indicators"

Bangalore, April 15 (Karnataka Information)

Class wise, subject wise "Parent-facing Learning Indicators" for class I to 5 based on NCERT learning outcomes and state curriculum have been prepared by the department for the parents to understand the learning levels. The draft copy of these indicators is available in the website www.dsert.kar.nic.in. The Educationist/Parents/Public are requested to provide suitable suggestion through email address seeu.dsert-ka@kar.nic.in or post to the Direction, DSERT, No. 4, 100 feet Ring road, Banashankari 3rd Stage, Bangalore -85 on or before 20-04-2017.